



ಮುಂದುವರಿಯಬಹುದು. ದಾರಿಯಲ್ಲಿ ಕಾವಲು ಬುರುಜುಗಳಿವೆ. ಅಲ್ಲಿಂದ ಸುತ್ತಮುತ್ತಲ ಬೆಟ್ಟಗುಡ್ಡಗಳ ಸುಂದರ ದೃಶ್ಯವನ್ನು ಸವಿಯಬಹುದು.

ನಂತರ, ಕೋಟೆಯ ಒಳಭಾಗವನ್ನು ತಲುಪುತ್ತೀರಿ. ಇದು ಏಳು ಸುತ್ತಿನ ಕೋಟೆಯಂತೆ. ಆದರೆ ಮೊದಲ ನಾಲ್ಕು ದ್ವಾರಗಳು ಸಿಗುವುದಿಲ್ಲ. ಕೊನೆಯ ಹಂತದ ಮೂರು ದ್ವಾರಗಳು ಮಾತ್ರ ಸಿಗುತ್ತವೆ. ಆಲ್ಲಲ್ಲಿ ಹಾಳಾಗಿದ್ದರೂ, ದ್ವಾರಗಳು ಹಳೆಯ ವೈಭವವನ್ನು ನೆನಪಿಸುವಷ್ಟರ ಮಟ್ಟಿಗೆ ಇನ್ನೂ ಉಳಿದುಕೊಂಡಿವೆ.

ಕೋಟೆಯ ತುತ್ತ ತುದಿಯಲ್ಲಿ ಶಿವನ ದೇವಾಲಯವಿದೆ. ದೇವಾಲಯದ ಮುಂಭಾಗದಲ್ಲಿ ದೊಡ್ಡ ದೀಪಸ್ಥಂಭವಿದೆ. ಕೆಳಭಾಗದಲ್ಲಿ ಕೆಲವು ಕೆತ್ತನೆಗಳನ್ನು ನೋಡಬಹುದು. ಕೊನೆಯ ದ್ವಾರದ ಬಳಿ ಒಂದು ಸಣ್ಣ ಮಟಪವೂ ಇದೆ. ದೇವಾಲಯದ ಪಕ್ಕದಲ್ಲಿ, ಇಳಿಜಾರಾದ ಬಂಡೆಯ ಮೇಲೆ, ಒಂದು ವಿಶಾಲವಾದ ಕಲ್ಲಿನ ಕೊಠಡಿಯಿದೆ. ಇದು ಬಹುಶಃ ಕಾವಲುಗಾರರ ಕೋಣೆ ಇದ್ದಿರಬಹುದು. ಅಲ್ಲಿಂದ ಸುತ್ತಲಿನ ಪ್ರಕೃತಿಸೌದರ್ಯವನ್ನು ನೋಡಿದರೆ, ಬೆಟ್ಟ ಹತ್ತಿದ ಆಯಾಸವೇ ಮರೆತುಹೋಗುತ್ತದೆ.

ಈ ಕೋಟೆಯ ಇನ್ನೊಂದು ವಿಶೇಷವೆಂದರೆ, ಇಲ್ಲಿ ಮಾಡಿರುವ ಮಳೆನೀರಿನ ಕೊಳಗಳು. ಇಲ್ಲಿ ಸುಮಾರು 19 ಕೊಳಗಳಿವೆ. ಇವುಗಳಲ್ಲಿ ಕೆಲವು ಕೊಳಗಳಲ್ಲಿ ಈಗಲೂ ನೀರು ಸಂಗ್ರಹವಾಗುತ್ತದೆ. ವಿವಿಧ ಹಂತಗಳಲ್ಲಿರುವ ಕಲ್ಲಿನ ಈ ಕೊಳಗಳ ನೀರು ಅಂದಿನ ದಿನಗಳಲ್ಲಿ ಕೋಟೆಯ ಒಳಗಿದ್ದವರಿಗೆ ಸಾಕಾಗುತ್ತಿದ್ದಿರಬಹುದು. ಅಲ್ಲಲ್ಲಿ ಸಣ್ಣ ದ್ವಾರಗಳನ್ನು ನೋಡಬಹುದು. ಒಬ್ಬರು ತೂರಿಕೊಳ್ಳುವಷ್ಟು ಚಿಕ್ಕದಾದ ಈ ದ್ವಾರಗಳು, ಕೋಟೆಯ ಮೇಲೆ ಆಕ್ರಮಣವಾದರೆ ತಪ್ಪಿಸಿಕೊಂಡು ಹೋಗಲು ಮಾಡಿದ ದಾರಿಗಳಂತೆ.

ಸುಮಾರು 1645ರಲ್ಲಿ ಗುಡಿಬಂಡೆಯನ್ನು ಆಳಿದ ಬೈರೇಗೌಡ ಎಂಬ ಪಾಳೆಯಗಾರ, ಈ ಕೋಟೆಯನ್ನು ಮತ್ತು ಕೆಳಗಿನ ವಿಶಾಲವಾದ ಕೆರೆಯನ್ನು ಕಟ್ಟಿಸಿದನಂತೆ. ಇದಕ್ಕಿಂತ ಹೆಚ್ಚಿನ ವಿವರ ಸಿಗುವುದಿಲ್ಲ. ಎಲ್ಲಿಯೂ ಮಾಹಿತಿ ಫಲಕಗಳು ಇಲ್ಲ. ಬೆಟ್ಟದ ಮೇಲೆ ಯಾರೂ ಹೆಚ್ಚಾಗಿ ಕಾಣಿಸುವುದೂ ಇಲ್ಲ. ಕುಡಿಯುವ ನೀರನ್ನು ಜೊತೆಯಲ್ಲಿ ಒಯ್ಯುವುದು ಒಳ್ಳೆಯದು.

ಬೆಟ್ಟವನ್ನು ಹತ್ತಲು ಸುಮಾರು ಒಂದು ಗಂಟೆಯಾಗುತ್ತದೆ. ಇಳಿಯಲು ಅರ್ಧಗಂಟೆ ಸಾಕು. ಅಷ್ಟೇನೂ ಕಡಿದಾಗಿಲ್ಲದ ದಾರಿಯುದ್ದಕ್ಕೂ ಮೆಟ್ಟಿಲುಗಳು ಇರುವುದರಿಂದ ಹತ್ತುವುದು ಅಷ್ಟು ಕಷ್ಟವಾಗಲಾರದು. ಬೆಟ್ಟದ ತುದಿಯಿಂದ ವಿಶಾಲವಾದ ಬೈರಸಾಗರವನ್ನು ಸಂಪೂರ್ಣವಾಗಿ ನೋಡಬಹುದು.

ಹೋಗುವುದು ಹೇಗೆ?

ಕೆಂಪೇಗೌಡ ವಿಮಾನ ನಿಲ್ದಾಣದ ಮಾರ್ಗದಲ್ಲಿ, ರಾಷ್ಟ್ರೀಯ ಹೆದ್ದಾರಿಯಲ್ಲಿ ವರ್ಲಕೊಂಡದವರೆಗೂ ಹೋಗಿ. ಅಲ್ಲಿಂದ ಗುಡಿಬಂಡೆ ರಸ್ತೆಗೆ ಎಡಕ್ಕೆ ತಿರುಗಿ. ಇದು ಸ್ವಲ್ಪ ಚಿಕ್ಕ ರಸ್ತೆ, ಆದರೆ ಚೆನ್ನಾಗಿದೆ. ಹೆದ್ದಾರಿಯಲ್ಲಿ ಹೋಟೆಲ್‌ಗಳಿವೆ. ಗುಡಿಬಂಡೆಯಲ್ಲಿ ಸಣ್ಣಪುಟ್ಟ ಹೋಟೆಲ್‌ಗಳು ಮಾತ್ರ ಇವೆ. ಬೆಟ್ಟದಲ್ಲಿ ಏನೂ ಸಿಗುವುದಿಲ್ಲ.